ಕಾರಣಕ್ಕಾಗಿ ಮತ್ತೆ ಪರೀಕ್ಷೆಗೆ ಕರೆಯತಕ್ಕಂಥದ್ದು ಅಷ್ಟು ಸರಿಯಾದುದು ಅಲ್ಲ. ಇದು ವೈಯಕ್ತಿಕವಾಗಿ ನನ್ನ ಸ್ವಂತ ಅಭಿಪ್ರಾಯವು ಕೂಡ ಹೌದು. ತಾವು ಹೇಳಿದಂತೆ ಮೊಸಲಾತಿಯ ಕ್ರಮಕ್ಕೆ ಅನುಗುಣವಾದಂಥ ರೀತಿಯಲ್ಲಿ ಈಗೇನು ತಯಾರಾಗಿತಕ್ಕಂಥ ಅರ್ಹತಾ ಪಟ್ಟಿ ಇದೆ ಆ ಅರ್ಹತಾ ಪಟ್ಟಿಯಲ್ಲಿ ಈಗ ಬಂದಿರತಕ್ಕ ಮಂಜೂರಾತಿಯಾದಂಥ ಹುದ್ದೆಗಳನ್ನೂ ಕೂಡ ಕೊಡಬೇಕಾಗಿರತಕ್ಕಂಥದ್ದು ಸರಿಯಾದ ಮಾರ್ಗ ಮತ್ತು ಅನೇಕ ಪ್ರಸಂಗಗಳಲ್ಲಿ ವಿನಾಕಾರಣ ವೆಚ್ಚ ಆಗತಕ್ಕಂಥದ್ದು, ಅವರಿಗೆ ಆತಂಕಕ್ಕೆ ಒಳಪಡಿಸುವುದು ಕೂಡ ತಪ್ಪು. ಆದರೆ ಅಂಥ ಒಂದು ನಿರ್ದೇಶನವನ್ನು ಸರ್ಕಾರ ಕೊಡಲಿಕ್ಕೆ ಸಾಧ್ಯತೆ ಇದೆಯೋ ಇಲ್ಲವೋ ಎನ್ನುವಂಥದ್ದರ ಬಗ್ಗೆ ನಾನು DPAR ರವರ ಜೊತೆ ಮಾತನಾಡುತ್ತೇನೆ. ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ಇದನ್ನು ತಂದು ಮುಖ್ಯ ಕಾರ್ಯದರ್ಶಿಗಳ ಜೊತೆ ಮಾತನಾಡುತ್ತೇನೆ. ತಾವು ಕೊಟ್ಟ ಅಭಿಪ್ರಾಯ, ಸಲಹೆ ಸಾಧುವಾದದ್ದು ಎನ್ನುವುದಾಗಿದ್ದರೆ in principle we agree on that. ಅದರ ಮೇಲೆ ನಾವು ಅವರ ಜೊತೆಗೆ ಮಾತನಾಡುತ್ತೇವೆ.

(ಇ) ವಿಷಯ : ದಿನಗೂಲಿ ನೌಕರರನ್ನು ಖಾಯಂಗೊಳಿಸುವ ಬಗ್ಗೆ.

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಅಧ್ಯಕ್ಷರೆ, ದಿನಗೂಲಿ ನೌಕರರ ಬಗ್ಗೆ ಈ ಸದನದಲ್ಲಿ ಮಾನ್ಯ ಉಪಮುಖ್ಯಮಂತ್ರಿಗಳಾದಂಥ ಹಣಕಾಸಿನ ಸಚಿವರು ಭರವಸೆಯನ್ನು ನೀಡಿದ್ದರು. ಬೆಂಗಳೂರಿಗೆ ಸುಮಾರು 20 ಸಾವಿರ ಜನ ಮೆರವಣಿಗೆಯಲ್ಲಿ ಬಂದಾಗ ಆ ಮೆರವಣಿಗೆಯ ಸಂದರ್ಭದಲ್ಲಿ ಸನ್ಮಾನ್ಯ ಸಚಿವಾರದಂಥ ಹೊರಟ್ಟಿಯವರು ಬಂದು ನಿಮಗೆ ಉದ್ಯೋಗ ಖಾಯಂ ಮಾಡುತ್ತೇವೆನ್ನುವ ಮಾತನ್ನು ಹೇಳಿ, ಈ ಬಗ್ಗೆ ಸರ್ಕಾರ ಈ ಕೂಡಲೇ ಒಂದು ಆದೇಶವನ್ನು ಹೊರಡಿಸುತ್ತೇವೆಂದು ಹೇಳಿ ಈಗಾಗಲೇ ಸ್ವಲ್ಪ ಹೆಚ್ಚ ಕಡಿಮೆ ಹತ್ತು ದಿನಗಳಾದವು. ಇವತ್ತಿನ ದಿವಸ 17 ಸಾವಿರ ದಿನಗೂಲಿ ನೌಕರರು ಅತ್ಯಂತ ನೋವಿನಿಂದ ಇದ್ದಾರೆ. ಅವರ ಭವಿಷ್ಯದ ಪ್ರಶ್ನೆ ಬಹಳ ಅಗಾಧವಾಗಿದೆ ಮತ್ತೆ ಗಂಭೀರವಾದಂಥ ಪರಿಸ್ಥಿತಿ ಕೂಡ ಇದೆ. ಸರ್ಕಾರದ ಕಡೆಯಿಂದ ಅಂದರೆ ಸರ್ಕಾರದ ಮುಖ್ಯ ಕಾರ್ಯದರ್ಶಿಯವರು ಒಂದು ಆದೇಶ ಹೊರಡಿಸಿ ಇವರೆಲ್ಲವನ್ನು ತೆಗೆದು ಮನೆಗೆ ಕಳುಹಿಸಿ ಎಂದು ನೇರವಾಗಿ ಒಂದು ಆದೇಶ ಹೊರಡಿಸಿದ್ದಾರೆ. ಈ ಆದೇಶವನ್ನು ಹಿಂದಕ್ಕೆ ಪಡೆಯಬೇಕೆಂದು ಒತ್ತಾಯ ಮಾಡಿ ಇಡೀ ರಾಜ್ಯದಾದ್ಯಂತ ಒಂದು ದೊಡ್ಡ ಮೇಳ ಇಲ್ಲಿಗೆ ಆಗಮಿಸಿತ್ತು. ಆ ಮೇಳಕ್ಕೆ ಬಂದಂಥ ಮಂತ್ರಿಗಳು ಆ ಸಂದರ್ಭದಲ್ಲಿ ಸ್ಪಷ್ಟವಾದಂಥ ಭರವಸೆಯನ್ನು ಕೊಟ್ಟಿದ್ದರು. ಮತ್ತೆ ಅವರನ್ನು ಯಾವ ಕಾರಣಕ್ಕೂ ತೆಗೆಯುವುದಿಲ್ಲ ಮತ್ತೆ ಮನೆಗೆ ಕಳುಹಿಸುವಂಥ ಕೆಲಸ ಮಾಡುವುದಿಲ್ಲವೆಂದು ಮಾನ್ಯ ಉಪ ಮುಖ್ಯಮಂತ್ರಿಗಳು

ಈ ಸದನದಲ್ಲಿ ಭರವಸೆ ಕೂಡ ಕೊಟ್ಟರು. ಆದರೆ, ಈ ಕ್ಷಣದವರೆಗೂ ಅದರ ಬಗ್ಗೆ ಒಂದು ಆದೇಶ ಹೊರಡಿಸಿಲ್ಲ. ಮುಖ್ಯ ಕಾರ್ಯದರ್ಶಿಯವರು ಹೊರಡಿಸಿರತಕ್ಕಂಥ ಆದೇಶವನ್ನು ಇನ್ನೂ ಹಿಂದಕ್ಕೆ ಪಡೆದಿಲ್ಲ. ಅವರ ಪರಿಸ್ಥಿತಿ ತ್ರಿಶಂಕು ಸ್ವರ್ಗವಾಗಿದೆ. ಅವರ ಜೀವನ ಭದ್ರತೆ ತೊಂದರೆಯಲ್ಲಿದೆ. ಆದ್ದರಿಂದ ಈ ಬಗ್ಗೆ ಸರ್ಕಾರ ಸ್ಪಷ್ಟವಾದಂಥ ಭರವಸೆಯನ್ನು ನೀಡಬೇಕೆಂದು ತಮ್ಮ ಮೂಲಕ ಕೇಳುವುದಕ್ಕೆ ಇಷ್ಟ ಪಡುತ್ತೇನೆ.

ಶ್ರೀ ಎಂ.ಪಿ. ಪ್ರಕಾಶ್ (ಗೃಹ ಮತ್ತು ಕಾನೂನು ಇಲಾಖೆ ಸಚಿವರು) : ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ವಾಟಾಳ್‌ನಾಗರಾಜ್‌ರವರು ಮತ್ತು ಸದನದಲ್ಲಿದ್ದಂಥ ಉಭಯ ಕಡೆಯ ಸದಸ್ಯರೆಲ್ಲರೂ ಕೂಡ ದಿನಗೂಲಿ ನೌಕರರ ಜೀವನ ಭದ್ರತೆ ಮತ್ತು ಅವರ ಸಮಸ್ಯೆಗಳ ಬಗ್ಗೆ ಸರ್ಕಾರ ಮಾನವೀಯ ದೃಷ್ಟಿಕೋನವನ್ನು ತೆಗೆದುಕೊಂಡು ಅವರೆಲ್ಲರನ್ನೂ ಖಾಯಂಗೊಳಿಸಬೇಕೆಂದು ಪ್ರಸ್ತಾಪ ಮಾಡಿದ್ದರು. ಆದರೆ, ನಮಗೆ ಬಂದಿರತಕ್ಕಂಥ ಸಮಸ್ಯೆ ಏನೆಂದರೆ, ಇದರ ಬಗ್ಗೆ ಸುಪ್ರೀಂ ಕೋರ್ಟ್‌ನವರು ಕೊಟ್ಟಿರತಕ್ಕಂಥ ತೀರ್ಮಾನ. ಈ ತೀರ್ಮಾನ ವಿಷಯದ ಬಗ್ಗೆ ತತ್‌ಕ್ಷಣವಾಗಿ ಸರ್ಕಾರದ ಮುಖ್ಯ ಕಾರ್ಯದರ್ಶಿಯವರು ಸುಪ್ರೀಂ ಕೋರ್ಟ್‌ನ ತೀರ್ಮಾನಕ್ಕೆ ಅನುಗುಣವಾಗುವಂಥ ಒಂದು ಸುತ್ತೋಲೆ ಅನ್ನು ಅವರು ಕಳುಹಿಸಿಕೊಟ್ಟಿದ್ದರು. ಮತ್ತೆ ಇದಕ್ಕೆ ಸಂಬಂಧಪಟ್ಟಂತೆ ನಿರ್ದೇಶನ ಕೂಡ ಕೊಟ್ಟಿದ್ದರು. ಇದಕ್ಕೊಂದು ಪರಿಹಾರವನ್ನು ಚರ್ಚೆ ಮಾಡಿ ಇನ್ನು ಎರಡು–ಮೂರುದಿವಸಗಳಲ್ಲಿ ಕಂಡು ಹಿಡಿಯುತ್ತೇವೆಂದು ಸನ್ಮಾನ್ಯ ಉಪ ಮುಖ್ಯಮಂತ್ರಿಗಳು ಭರವಸೆಯನ್ನು ಸಹ ಕೊಟ್ಟಿದ್ದರು. ಅವರೆಲ್ಲರೂ ತೆಗೆಯಬಾರದೆಂಬುದರ ಬಗ್ಗೆ ಈಗಾಗಲೇ ಸಂಬಂಧಪಟ್ಟವರಿಗೆ ಆದೇಶವನ್ನು ಕಳುಹಿಸಿಕೊಟ್ಟಿದ್ದಾರೆ. ಈಗ ಯಾರನ್ನೂ ಕೂಡ ಅಲ್ಲಿ ತೆಗೆಯತಕ್ಕಂಥದಾಗಲಿ ಆಗುವುದಿಲ್ಲ ಮತ್ತು ಮುಖ್ಯ ಕಾರ್ಯದರ್ಶಿಯವರು ಕೊಟ್ಟಿರತಕ್ಕಂಥ ನಿರ್ದೇಶನವನ್ನು ಪಾಲಿಸದೆ ಅದನ್ನು ತಡೆಯಾಜ್ಞೆಮಾಡಿದ್ದು, ಅದು ಈಗ ನಿಲುಗಡೆ ಆಗಿದೆ. ಇನ್ನು ಎರಡನೇ ಪ್ರಶ್ನೆ ಇರತಕ್ಕಂಥದ್ದು ಏನೆಂದರೆ, ಇದರ ಬಗ್ಗೆ ಇರತಕ್ಕಂಥ ಸಮಸ್ಯೆಯನ್ನು ಬಗೆಹರಿಸಬೇಕೆಂದು ಪ್ರೊ. ಶರ್ಮಾರವರು ಇದರ ಬಗ್ಗೆ ಹಿಂದೆ ಪ್ರೋರಾಟ ಕೂಡ ಮಾಡಿದ್ದಾರೆ. ಒಂದು ಕಟ್ ಆಫ್ ಡೇಟ್ ಕೊಟ್ಟು 1984ಕ್ಕಿಂತ ಆಚೆಗೆ 10 ವರ್ಷಕ್ಕಿಂತ ಹೆಚ್ಚು ಸೇವೆಯಲ್ಲಿ ಕಳೆದಿರುತಕ್ಕಂಥವರು ಯಾರ್ಯಾರು ಇದ್ದಾರೆ, ಅವರೆಲ್ಲರನ್ನೂ ಖಾಯಂಗೊಳಿಸಬೇಕು ಅಂದರೆ ಸೂಪರ್ ನ್ಯೂಮನರಿ ಪೋಸ್ಟ್ ಎಂದು ಅವರೆಲ್ಲರನ್ನೂ ಪರಿಗಣಿಸಬೇಕೆಂದು ಹಾಗೂ ವಿವಿಧ ಇಲಾಖೆಗಳಲ್ಲಿ ಕೆಲಸ ಮಾಡತಕ್ಕಂಥವರಿಗೆ ಸಂಬಂಧಪಟ್ಟಂಥ ಜಿಲ್ಲೆಯ ಜಿಲ್ಲಾಧಿಕಾರಿಗಳು ಆಜ್ಞೆಯನ್ನು ಕೊಡಬೇಕೆಂದು ಮಾಡಿರತಕ್ಕಂಥದ್ದು ಆಗಿದೆ. ನಂತರ ಬಂದಿರತಕ್ಕಂಥ ನೌಕರರು ಯಾರ್ಯಾರು ಇದ್ದಾರೆ, ಅವರೂ ಕೂಡ 15, 20 ವರ್ಷಗಳ ವರೆಗೆ ಸೇವೆ ಮಾಡಿದ್ದಾರೆ. ಆದರೆ, ಪಂಚ

ಸದಸ್ಯರು ಇರತಕ್ಕಂಥ ಸುಪ್ರೀ ಕೋರ್ಟ್‌ನ ಪೀಠ ಕಾನೂನಿನ ಅನೇಕ ವಿಷಯಗಳನ್ನು ಎತ್ತಿಕೊಂಡು ಅದರ ಬಗ್ಗೆ ಚರ್ಚೆ ಮಾಡಿ ತೀರ್ಮಾನ ಕೊಟ್ಟಿರತಕ್ಕಂಥ ಹಿನ್ನಲೆಯಲ್ಲಿ, ಕಾನೂನಿನ ಸಾಧಕಬಾಧಕಗಳು ಮತ್ತು ಈ ಒಂದು ವರ್ಗಕ್ಕೆ ಮಾತ್ರ ನಿರ್ಣಯ ಮಾಡಿದರೆ ಬೇರೆ ಕಡೆ ಇರತಕ್ಕಂಥ ದಿನಗೂಲಿ ನೌಕರರೆಲ್ಲರನ್ನೂ ಖಾಯಂಗೊಳಿಸಬೇಕೆಂಬ ಬೇಡಿಕೆ ಬಂದಾಗ ಅದನ್ನು ನಿರಾಕರಿಸುವುದು ಎಷ್ಟರಮಟ್ಟಿಗೆ ಸಾಧ್ಯತೆ ಆಗುತ್ತದೆ ಎಂಬುದನ್ನು ಮತ್ತು ಅಕಸ್ಮಾತ್ ಅವರೆಲ್ಲರನ್ನೂ ಖಾಯಂಗೊಳಿಸುವುದಾಗಿದ್ದರೆ ಮುಂದೆ ಇದರಿಂದ ಹಣಕಾಸಿನ ಹೊರೆ ಯಾವರೀತಿಯಾಗುತ್ತದೆ ಎನ್ನತಕ್ಕಂಥ ಅನೇಕ ರೀತಿಯ ವಿಷಯಗಳು ಇರತಕ್ಕಂಥ ಕಾರಣಗಳಿಂದ ಪ್ರಾಯಶಃ ಎರಡು ಮೂರು ದಿವಸ ತಡವಾಗಿದೆ. ಈಗಾಗಲೇ 10 ದಿವಸ ಆಗಿದೆ ಎಂದು ಮಾನ್ಯ ಸದಸ್ಯರು ಹೇಳಿದ್ದಾರೆ. ಅವರ ಜೀವನದ ಭದ್ರತೆಯ ಬಗ್ಗೆ ಇಲ್ಲಿ ಯಾರದ್ದೂ ಕೂಡ ಯಾವುದೇ ರೀತಿಯ ಭಿನ್ನಾಭಿಪ್ರಾಯ ಇಲ್ಲ. ಇವರೆಲ್ಲರನ್ನೂ ಆ ಆಜ್ಞೆಯ ಮೂಲಕ ಯಾರನ್ನು ತೆಗೆದು ಹಾಕಿಲ್ಲ. ಈ ಒಂದು ಕಾರಣಕ್ಕಾಗಿ ಸರ್ಕಾರಕ್ಕೆ ಮತ್ತೊಂದು ಸ್ವಲ್ಪ ದಿವಸದವರೆಗೆ ಕಾಲಾವಕಾಶ ಬೇಕು. ಕಾನೂನಿನ ಪರಿಣಾಮಗಳನ್ನು ಯೋಚನೆ ಮಾಡಿ ಇದರ ಬಗ್ಗೆ ನಿರ್ಧಾರ ತೆಗೆದು ಕೊಳ್ಳಬೇಕಾಗಿದೆ.

ಶ್ರೀ ವಾಟಾಳ್ ನಾಗರಾಜ್ : ಮುಖ್ಯ ಕಾರ್ಯದರ್ಶಿಯವರು ಹೊರಡಿಸಿರತಕ್ಕಂಥ ಆದೇಶವನ್ನು ಹಿಂದಕ್ಕೆ ತೆಗೆದುಕೊಳ್ಳಬೇಕು. ಮುಖ್ಯ ಕಾರ್ಯದರ್ಶಿಯವರು ಒಂದು ಕಡೆ ಕತ್ತು ತೆಗೆಯುವುದಕ್ಕೆ ಕತ್ತಿ ಹಿಡಿದುಕೊಂಡಿದ್ದಾರೆ. ಮತ್ತೊಂದು ಕಡೆ ಉಪದೇಶ ಮಾಡತಕ್ಕಂಥದ್ದು ಒಳ್ಳೆಯ ಸೂಚನೆಯಲ್ಲ. ಮುಖ್ಯ ಕಾರ್ಯದರ್ಶಿಯವರು ಹೊರಡಿಸಿರುವ ಆದೇಶವನ್ನು ದಯವಿಟ್ಟು ತಾವು ಹಿಂದಕ್ಕೆ ಪಡೆಯಬೇಕು. ಆದ್ದರಿಂದ ಇದರ ಬಗ್ಗೆ ತಾವು ಸ್ಪಷ್ಟವಾದ ಉತ್ತರ ಹೇಳಬೇಕು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಮುಖ್ಯ ಕಾರ್ಯದರ್ಶಿಯವರು ಕಳುಹಿಸಿರತಕ್ಕಂಥ ಸುತ್ತೋಲೆಯನ್ನು ವಾಪಸ್ಸು ಪಡೆಯಬೇಕೆಂದು ಅವತ್ತಿನದಿವಸ ಈ ವಿಷಯವನ್ನು ಸದನದಲ್ಲಿ ಪ್ರಸ್ತಾಪ ಮಾಡಲಾಗಿತ್ತು. ಅವರಿಗೆ ಯಾವುದೇ ರೀತಿಯಲ್ಲಿ ತೊಂದರೆ ಆಗದ ಹಾಗೆ ಮತ್ತು ಕೆಲಸದಿಂದ ಹೊರಕ್ಕೆ ಹಾಕದ ರೀತಿಯಲ್ಲಿ ನೋಡಿಕೊಳ್ಳುತ್ತೇವೆಂದು ಮಾನ್ಯ ಉಪ ಮುಖ್ಯಮಂತ್ರಿಯವರು ಈ ಸದನದಲ್ಲಿ ಆಶ್ವಾಸನೆಯನ್ನು ಸಹ ಕೊಟ್ಟಿದ್ದಾರೆ. ಈಗ ಸುಪ್ರೀಂ ಕೋರ್ಟ್‌ನ ಜಡ್ಜ್‌ಮೆಂಟ್ ಇದಕ್ಕೆ ಸಂಬಂಧಪಟ್ಟಂತೆ ಇದೆ. ಆದರೆ ಇದಕ್ಕೆ ತಿದ್ದುಪಡಿ ತಂದು ಮಾಡುವುದಕ್ಕೆ ಸಾಧ್ಯತೆ ಇದೆ ಎಂದು ಹೇಳಲಾಗುತ್ತಿದೆ. ಅಂದರೆ, ಕಾನ್‌ಸ್ಟಿಟ್ಯೂಷನ್ 31(ಸಿ) ಅಡಿಯಲ್ಲಿ ತಿದ್ದುಪಡಿ ಮಾಡುವುದಕ್ಕೆ ಅವಕಾಶ ಇದೆ ಎಂದು ಹೇಳಲಾಗುತ್ತಿದೆ.

ಶ್ರೀ ಎಂ.ಪಿ. ಪ್ರಕಾಶ್ : ಆರ್ಟಿಕಲ್ 35ರ ಅಡಿಯಲ್ಲಿ ಮಾಡಬಹುದೆಂದು ಪ್ರೊ. ಶರ್ಮಾರವರು ನನಗೆ ಮನವಿಯನ್ನು ಕೊಟ್ಟಿದ್ದಾರೆ. ಅದನ್ನು ನಾನು ಕಾನೂನು ಇಲಾಖೆಗೆ ಕಳುಹಿಸಿಕೊಟ್ಟಿದ್ದೇನೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : 17 ಸಾವಿರ ದಿನಗೂಲಿ ನೌಕರರು ಸುಮಾರು 15 ರಿಂದ 20 ವರ್ಷಗಳವರೆಗೆ ಕೆಲಸ ಮಾಡಿದ್ದು, ಅವರನ್ನು ಈಗ ತೆಗೆದರೆ ಅವರಿಗೆ ಏಜ್‌ಬಾರ್ ಆಗಿರುವುದರಿಂದ ಅವರು ಎಲ್ಲಿಗೂ ಕೂಡ ಹೋಗುವುದಕ್ಕೆ ಆಗುವುದಿಲ್ಲ. ಆದ್ದರಿಂದ ಮಾನವಿಯತೆಯ ದೃಷ್ಟಿಯಿಂದ ತಕ್ಷಣ ಅದನ್ನು ಪರಿಹಾರ ಮಾಡತಕ್ಕಂಥ ಜವಾಬ್ದಾರಿಯನ್ನು ಸರ್ಕಾರ ತೆಗೆದುಕೊಳ್ಳಬೇಕು.

ಶ್ರೀ ವಾಟಾಳ್ ನಾಗರಾಜ್ : ಮುಖ್ಯ ಕಾರ್ಯದರ್ಶಿಯವರು ಕಳುಹಿಸಿಕೊಟ್ಟಿರತಕ್ಕಂಥ ಬಾಣವನ್ನು ಮೊದಲಿಗೆ ಹಿಂದಕ್ಕೆ ಪಡೆಯಬೇಕು. ಅವರ ಮೇಲೆ ನಮಗೆ ಕರುಣೆ ಇದೆ. ಆದ್ದರಿಂದ ಅವರನ್ನು ನಾವು ತೆಗೆಯುವುದಿಲ್ಲವೆಂಬ ವಾದವೆಲ್ಲವನ್ನು ಸರ್ಕಾರದವರು ಹೇಳುತ್ತಾರೆ. ಮುಖ್ಯ ಕಾರ್ಯದರ್ಶಿಯವರು ಕಳುಹಿಸಿರತಕ್ಕಂಥ ಆ ಒಂದು ತ್ರಿಶೂಲ, ಆ ಕೆಟ್ಟ ಒಂದು ಆದೇಶ ಮೊದಲು ಹಿಂದಕ್ಕೆ ಹೋಗಬೇಕು. ಇದರ ಬಗ್ಗೆ ತಾವು ಸ್ಪಷ್ಟವಾದಂಥ ಒಂದು ಭರವಸೆಯನ್ನು ಕೊಡಬೇಕು.

ಶ್ರೀ ಎಂ.ಪಿ. ಪ್ರಕಾಶ್ : ಮಾನ್ಯ ಅಧ್ಯಕ್ಷರೆ, ಇದರ ಬಗ್ಗೆ ನನ್ನ ಹತ್ತಿರ ಮಾಹಿತಿ ಇಲ್ಲ. ಅಂದರೆ, ವಾಪಸ್ಸು ತೆಗೆದುಕೊಂಡಿರತಕ್ಕಂಥದರ ಬಗ್ಗೆ ಮಾನ್ಯ ಉಪ ಮುಖ್ಯಮಂತ್ರಿಯವರು ನಿರ್ದೇಶನ ಕೊಟ್ಟಿರತಕ್ಕಂಥ ವಿಚಾರದ ಬಗ್ಗೆ ನನ್ನ ಹತ್ತಿರ ಮಾಹಿತಿ ಇಲ್ಲ. ಆದ್ದರಿಂದ ಸದರಿ ಮಾಹಿತಿಯನ್ನು ತರಿಸಿಕೊಂಡು ಅವರಿಗೆ ನೇರವಾಗಿ ವಿಷಯಗಳನ್ನು ಕಳುಹಿಸಿಕೊಡುತ್ತೇನೆ.

ಡಾ: ಶರಣಪ್ಪ ಪ್ರಕಾಶ್ ರುದ್ರಪ್ಪ ಪಾಟೀಲ್ : ಮಾನ್ಯ ಅಧ್ಯಕ್ಷರೆ, ಈ ವಿಷಯದ ಬಗ್ಗೆ ಮಾನ್ಯ ಸಚಿವರು ಸ್ವಲ್ಪ ಗಮನ ಕೊಡಬೇಕು. ಸರ್ಕಾರ ಯಾವರೀತಿಯಾಗಿ ಬಿಎಂಐಸಿ ಬಗ್ಗೆ ಸುಪ್ರೀಂ ಕೋರ್ಟ್‌ಗೆ ಮೇಲ್ಮನವಿಯನ್ನು ಸಲ್ಲಿಸಿದ್ದೀರೋ, ಅದೇ ರೀತಿಯಾಗಿ ಈ ವಿಷಯದ ಮೇಲೆ ಸುಪ್ರೀಂ ಕೋರ್ಟ್‌ನಲ್ಲಿ ಮೇಲ್ಮನವಿ ಸಲ್ಲಿಸುವುದಕ್ಕೆ ಏನು ಅಡ್ಡಿ ಇತ್ತು ಎನ್ನತಕ್ಕಂಥದ್ದು ನನಗೆ ಅರ್ಥವಾಗುತ್ತಿಲ್ಲ. ಏಕೆಂದರೆ ಇದಕ್ಕೆ ತಿದ್ದುಪಡಿ ತಂದು ಮಾಡುವುದಕ್ಕಿಂತ ಸರ್ಕಾರದ ವತಿಯಿಂದ ಸುಪ್ರೀಂ ಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿ ಇದರಲ್ಲಿ ತಪ್ಪೇನು ಇದೆ?

ಶ್ರೀ ಎಂ.ಪಿ. ಪ್ರಕಾಶ್ : ಸನ್ಮಾನ್ಯ ಅಧ್ಯಕ್ಷರೆ, ಸುಪ್ರೀಂ ಕೋರ್ಟ್‌ನವರು ರಜಾದಿನದಲ್ಲಿದ್ದರು. ಯಾವುದಾದರೂ ಈ ರೀತಿಯಾದ ರಿವ್ಯೂ ಪಿಟಿಶನ್ ಹಾಕತಕ್ಕಂಥದ್ದು ಇದ್ದರೆ ಕೋರ್ಟ್ ಪ್ರಾರಂಭವಾದ 3ನೇ ತಾರೀಖಿನದಿವಸವೇ ಇದನ್ನು ಹಾಕಬೇಕೆಂಬ

ಆದೇಶ ಮಾಡಿದ್ದರಿಂದ, ನೂರಾರು ಜನ ಇದಕ್ಕೆ ಸಂಬಂಧಪಟ್ಟಂಥವರು ಸಾಲಾಗಿ ನಿಂತುಕೊಂಡು ಇದನ್ನು ಹಾಕಿದ್ದೇವೆ. ಆದ್ದರಿಂದ ಇದಕ್ಕೂ ಅದಕ್ಕೂ ನೇರವಾದಂಥ ಸಂಬಂಧವಿಲ್ಲ. ಆದರೆ ಇದು ಹೊಸದಾಗಿ ಉದ್ಭವವಾಗಿರತಕ್ಕಂಥದ್ದು ಅಂದರೆ ಸುಪ್ರೀಂ ಕೋರ್ಟ್‌ನಲ್ಲಿ ಐದು ಮಂದಿ ಕುಳಿತು ಕಾನ್‌ಸ್ಟಿಟ್ಯೂಷನ್ ಬೆಂಚ್ ಮಾಡಿರತಕ್ಕಂಥ ತೀರ್ಮಾನವಾಗಿದೆ.

ಶ್ರೀ ಬಸವರಾಜ ರಾಯರೆಡ್ಡಿ : ಇದರ ಬಗ್ಗೆ ಅಪೀಲ್ ಹೋಗುವುದಕ್ಕೆ ಆಗುವುದಿಲ್ಲ.

ಶ್ರೀ ಎಂ.ಪಿ. ಪ್ರಕಾಶ್ : ಮಾನ್ಯ ಅಧ್ಯಕ್ಷರೆ, ಹಿರಿಯ ಸದಸ್ಯರಾದ ಶ್ರೀ ರಾಯರೆಡ್ಡಿಯವರು ಕೂಡ ನನ್ನ ಸಹಾಯಕ್ಕೆ ಬಂದರು. ಅವರನ್ನು ಉಳಿಸಿಕೊಳ್ಳತಕ್ಕಂಥದ್ದು ಮತ್ತು ಯಾವರೀತಿಯಾಗಿ ಕಾನೂನಿನ ತೊಡಕಿನಿಂದ ಹೊರಕ್ಕೆ ಬರಬೇಕೆಂಬುದರ ಬಗ್ಗೆ ನಾವು ಯೋಚನೆ ಮಾಡುತ್ತಿದ್ದೇವೆ. ಇದಕ್ಕೆ ಕಾಲಾವಕಾಶವನ್ನು ಕೇಳಿದ್ದೇವೆ. ಮುಖ್ಯ ಕಾರ್ಯದರ್ಶಿಯವರು ಮಾಡಿರತಕ್ಕಂಥ ಆದೇಶವನ್ನು ಹಿಂದಕ್ಕೆ ತೆಗೆದುಕೊಳ್ಳಬೇಕೆಂದು ಮಾನ್ಯ ವಾಟಾಳ್‌ನಾಗರಾಜ್‌ರವರು ಹೇಳಿದರು. ಆದರೆ, ಇದಕ್ಕೆ ಸಂಬಂಧಪಟ್ಟಂಥ ಮಾಹಿತಿ ನನ್ನ ಹತ್ತಿರ ಇಲ್ಲ. ಇವತ್ತೆ ಆ ಮಾಹಿತಿ ತರಿಸಿಕೊಂಡು ತಮಗೆ ಹೇಳುತ್ತೇನೆ.

(ಈ) ವಿಷಯ : ಕೈಮಗ್ಗ ಅಭಿವೃದ್ಧಿ ನಿಗಮದಲ್ಲಿ ನೌಕರರು ಉದ್ಯೋಗವಿಲ್ಲದೆ ಉಪವಾಸ ಮಾಡುತ್ತಿರುವ ಬಗ್ಗೆ.

ಶ್ರೀ ಸಿದ್ದುಸವದಿ (ಜಮಖಂಡಿ) : ಮಾನ್ಯ ಅಧ್ಯಕ್ಷರೆ, ಕೈಮಗ್ಗ ಅಭಿವೃದ್ಧಿ ನಿಗಮದಲ್ಲಿ ಕೆಲಸ ಮಾಡತಕ್ಕಂಥ ನೇಕಾರರ ಉದ್ಯೋಗ ಸುಮಾರು ಎರಡು ತಿಂಗಳಿಂದ ನಿಂತು ಹೋಗಿದೆ. ಅವರ ಕೈಮಗ್ಗಗಳು ನಿಂತು ಹೋಗಿದ್ದರಿಂದ ಅವರು ಉಪವಾಸ ಬೀಳತಕ್ಕಂಥ ಸ್ಥಿತಿ ನಿರ್ಮಾಣ ಆಗಿದ್ದು, ಈ ವಿಷಯವನ್ನೂ ಸರ್ಕಾರದ ಗಮನಕ್ಕೆ ತಂದರೂ ಕೂಡ ಇದುವರೆಗೂ ಅವರ ಉದ್ಯೋಗ ಮಾಡಲು ಅವರಿಗೆ ಬೇಕಾಗಿರತಕ್ಕಂಥ ಕಚ್ಚಾಮಾಲನ್ನು ಒದಗಿಸದೆ ಮತ್ತು ಅವರಿಗೆ ಕೂಲಿ ಕೊಡಲಾರದೆ ಅವರನ್ನು ಸತಾಯಿಸುವಂಥ ಪರಿಸ್ಥಿತಿ ನಿರ್ಮಾಣವಾಗಿದೆ. ವಿದ್ಯಾವಿಕಾಸ್ ಯೋಜನೆ ಅಡಿಯಲ್ಲಿ ಸುಮಾರು 43 ಕೋಟಿ ರೂಪಾಯಿಗಳಷ್ಟು ಬಟ್ಟೆಯನ್ನು ಸರ್ಕಾರಕ್ಕೆ ಸರಬರಾಜು ಮಾಡಿರತಕ್ಕಂಥ ಬಾಕಿ ಹಣ ಇದುವರೆಗೂ ಕೂಡ ಅವರಿಗೆ ಪಾವತಿ ಆಗದೇ ಇರುವುದರಿಂದ ಈ ರೀತಿಯಾದ ಒಂದು ಸಂದರ್ಭ ಅವರಿಗೆ ಒದಗಿ ಬಂದಿದೆ. ಇವತ್ತಿನ ದಿವಸ ಕೆಹೆಚ್‌ಡಿಸಿಯಲ್ಲಿ ಕೆಲಸ ಮಾಡತಕ್ಕಂಥ ಸುಮಾರು 100ಕ್ಕೆ 90ರಷ್ಟು ನೇಕಾರರು ಪಟ್ಟಣಗಳಲ್ಲಿದ್ದಾರೆ. ಆದರೆ ವಿಚಿತ್ರವೆಂದರೆ ವಿದ್ಯಾವಿಕಾಸ್ ಯೋಜನೆ ಅಡಿಯಲ್ಲಿ ಬಟ್ಟೆ ತಯಾರು ಮಾಡಿಕೊಟ್ಟಂಥದ್ದಕ್ಕೆ ಕೊಡಬೇಕಾಗಿರತಕ್ಕಂಥ ಪೇಮೆಂಟ್ ಜಿಲ್ಲಾ ಪಂಚಾಯತ್‌ನಿಂದ ತಾಲ್ಲೂಕು ಪಂಚಾಯತ್‌ಗೆ